> ದೇವಿ ನನ್ನ ಬಳಪವನ್ನು ನೋಡಿದೊಡನೇ ‘ನಂಗೆ ನಿನ್ನೆ ರಾತ್ರೀನೆ ಮುಕ್ತಾ ಕನಸಲ್ಲಿ ಬಂದು ನೀನು ಇವತ್ತು ಇಡಿಯ ಬಳಪ ತರ್ತೀಯಾ ಅನ್ನೊದನ್ನು ಹೇಳಿದ್ಲು. ಅವಳಿಗೆ ಆ ಬಳಪ ಬೇಕಂತೆ. ಅದನ್ನ ಇಲ್ಲಿಯೇ ಅವಳ ಸಮಾಧಿಯ ಮೇಲೆ ಇಟ್ಟುಹೋಗು’ ಎಂದಳು.

ಹುಡುಗರು ಕೂಡ ನಡುಗುತ್ತಿದ್ದರು. ಕಾಡಿನ ದಾರಿಯನ್ನು ಹಾಯ್ದು ಶಾಲೆಯನ್ನು ಸೇರಲು ನನಗೆ ಅವಳ ಸಂಗಾತ ಬೇಕೇಬೇಕಿತ್ತು. ಹೀಗೆ ಯಾವಾಗಲೂ ನನಗೆ ಜೊತೆಯಾಗುತ್ತಿದ್ದ ಅವಳು ವರ್ಷದಲ್ಲಿ ಹದಿನೈದು ದಿನ ಮಾಯವಾಗಿಬಿಡುತ್ತಿದ್ದಳು. ಕೇಳಿದರೆ ತನಗೊಬ್ಬ ತಂಗಿ ಹುಟ್ಟಿರುವಳೆಂದು, ಮೈಲಿಗೆಯಲ್ಲಿ ಶಾಲೆಗೆ ಬರಲಾಗಲಿಲ್ಲವೆಂದು ಕಾರಣ ನೀಡುತ್ತಿದ್ದಳು. ತಂಗಿಯರೇ ಇಲ್ಲದ ನನಗೆ ವರ್ಷವರ್ಷವೂ ಹೊಸ ತಂಗಿಯರನ್ನು ಪಡೆಯುವ ಅವಳ ಭಾಗ್ಯದ ಬಗ್ಗೆ ಅಸೂಯೆನಿಸುತ್ತಿತ್ತು. ಆದರೆ ಅವಳು ಮಾತ್ರ ತನಗೊಬ್ಬ ತಮ್ಮ ಬೇಕೆಂದೂ, ಅದಕ್ಕೆಂದೇ ಅವಳಮ್ಮ ಪ್ರತಿವರ್ಷವೂ ಹಡೆಯುತ್ತಾಳೆಂದೂ ಕತೆ ಹೇಳಿದ್ದಳು. ಅವಳ ನಾಲ್ಕನೇ ತಂಗಿ ಹುಟ್ಟದಾಗ ಅವಳು ತಂಗಿಗೆ ಮುಕ್ತಾ ಎಂದು ಹೆಸರಿಟ್ಟಿರುವುದಾಗಿಯೂ, ಹಾಗೆ ಇಟ್ಟರೆ ಹೆಣ್ಣು ಹುಟ್ಟುವುದು ಮುಕ್ತಾಯವಾಗಿ ಗಂಡು ಹುಟ್ಟುವುದೆಂದು ಅರ್ಚಕರು ತಿಳಿಸಿರುವುದಾಗಿಯೂ ಹೇಳಿದ್ದಳು. ಅದಾಗಿ ಮತ್ತೆ ತಿಂಗಳಿಗೆ ಅವಳು ರಜೆ ಮಾಡಿದಾಗ ನಾನು ಕುತೂಹಲದಿಂದ ತಮ್ಮ ಹುಟ್ಟಿದನೇನೆ? ಎಂದು ಪ್ರಶ್ನಿಸಿದ್ದೆ. ಅದಕ್ಕವಳು ನನ್ನನ್ನು ಕನಿಕರದಿಂದ ನೋಡಿ, “ಆರು ತಿಂಗಳಿಗೆ ಮತ್ತೆ ಮಗು ಹುಟ್ತದೆಯೇನೆ? ನಿಂಗಂತೂ ಏನೇನು ಗೊತ್ತಿಲ್ಲ. ಮಗು ಹುಟ್ಲಿಕ್ಕೆ ಒಂಬತ್ತು ತಿಂಗಳಾದ್ರೂ ಬೇಕು. ನಮ್ಮ ಮುಕ್ತಾ ತೀರ್ಕಂಡ್ಲು ಕಣೆ. ಅದಕ್ಕೇ ಶಾಲೆ ರಜೆ ಮಾಡ್ದೆ. ಅವಳನ್ನ ನಾವು ಶಾಲೆಗೆ ಹೋಗುವ ದಾರಿಯಲ್ಲೇ ಹುಗದಾರೆ.” ಎಂದಳು. ಅವಳ ತಂಗಿಯನ್ನು ಮಣ್ಣುಮಾಡಿದ ಜಾಗ ಬಂದೊಡನೆ ಅವಳು ಒಂದು ಹಸಿರು ಟೊಂಗೆಯನ್ನು ಕಿತ್ತು ಮಣ್ಣಿನ ಮೇಲಿಟ್ಟಳು. ಯಾಕೆ ಹಾಗೆ ಮಾಡಿದಳೆಂದು ಕೇಳಿದಾಗ ಸತ್ತ ಅವಳ ತಂಗಿಗೆ ಅಲ್ಲಿಂದ ಹಾದು ಹೋಗುವಾಗಲೆಲ್ಲ ಏನಾದರೂ ಹಾಕಬೇಕೆಂದು, ಇಲ್ಲವಾದಲ್ಲಿ ಕನಸಿನಲ್ಲಿ ಬಂದು ಕಾಡುವಳೆಂದೂ ಕತೆ ಹೇಳಿದಳು. ನನಗಂತೂ ಏನೊಂದೂ ತಿಳಿಯದೇ ಎಲ್ಲ ಅಯೋಮಯವಾಗಿ ಶಾಲೆಯಿಂದ ಮನೆಗೆ ಬಂದವಳೇ ಅಮ್ಮನಲ್ಲಿ, “ಅಮ್ಮಾ, ಮಗು ಹೇಗೆ ಹುಟ್ಟುತ್ತೆ?” ಅಂತ ಕೇಳಿ ಬೈಸಿಕೊಂಡಿದ್ದೆ.

ಹೀಗಿರುವಾಗಲೊಮ್ಮೆ ಅಪ್ಪನಲ್ಲಿ ಬಳಪವನ್ನು ಕೇಳಿದಾಗ ಏನೋ ಕೆಲಸದ ಗಡಿಬಿಡಿಯಲ್ಲಿರುವ ಅಪ್ಪ ಇಡಿಯ ಬಳಪವನ್ನೇ ನನ್ನ ಕೈಗಿಟ್ಟು ಜಾಗ್ರತೆಯಾಗಿ ಬಳಸುವಂತೆ ತಿಳಿಸಿ ಹೋದರು. ಇಡಿಯ ಬಳಪ ನನ್ನ ಕೈಸೇರಿದಾಗ ಸ್ವರ್ಗವೇ ದೊರೆತಂತಾಗಿ ಖುಷಿಯಿಂದ ಕುಣಿದಾಡಿಬಿಟ್ಟಿದ್ದೆ. ಅದನ್ನೆಲ್ಲಿಯಾದರೂ ಶಾಲೆಯ ಚೀಲದೊಳಗಿಟ್ಟರೆ ತುಂಡಾದೀತೆಂದು ಕೈಯ್ಯಲ್ಲಿಯೇ ಹಿಡಿದು ಶಾಲೆಗೆ ನಡೆದೆ. ದೇವಿಗೆ ಇಡಿಯ ಬಳಪವನ್ನು ತೋರಿಸಿ ಅಚ್ಚರಿಪಡಿಸಬೇಕೆಂದು ಬಿರಬಿರನೆ ಶಾಲೆಯ ಕಡೆಗೆ ಹೆಜ್ಜೆಹಾಕಿದೆ. ದೇವಿ ನನ್ನ ಬಳಪವನ್ನು ನೋಡಿದೊಡನೇ ಅಚ್ಚರಿಗೊಳ್ಳದೇ ನಾನು ಇಂದು ಇಡಿಯ ಬಳಪವನ್ನು ತರುವ ವಿಷಯ ತನಗೆ ತಿಳದಿತ್ತು ಎಂಬಂತೆ ವ್ಯವಹರಿಸಿದಳು. ಅವಳ ತಂಗಿಯನ್ನು ಮಣ್ಣುಮಾಡಿದ ಜಾಗ ಬಂದೊಡನೆ ಒಂದರಗಳಿಗೆ ಅಲ್ಲಿ ನಿಂತು, “ನಂಗೆ ನಿನ್ನೆ ರಾತ್ರೀನೆ ಮುಕ್ತಾ ಕನಸಲ್ಲಿ ಬಂದು ನೀನು ಇವತ್ತು ಇಡಿಯ ಬಳಪ ತರ್ತೀಯಾ ಅನ್ನೊದನ್ನು ಹೇಳಿದ್ಲು. ಅವಳಿಗೆ